**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪ್ರಕಾಶ ಕೆ. ರಾಥೋಡ್ ರವರ ನಿಯಮ-72ರ ಗಮನ ಸೆಳೆಯುವ ಸೂಚನೆಗೆ ಉತ್ತರಿಸುವ ಕುರಿತು.**

**ಪ್ರಶ್ನೆ**

**ವಿಕಲಚೇತನರಿಗಾಗಿ ರಾಜ್ಯಾದ್ಯಂತ 1 ರಿಂದ 10ನೇ ತರಗತಿಯ ವರೆಗೆ ಅವರಿಗಾಗಿಯೇ ವಿದ್ಯಾಭ್ಯಾಸ ಮಾಡಲು ವಿಶೇಷ ಶಾಲೆಗಳನ್ನು ಖಾಸಗಿ ಹಾಗೂ ಸರ್ಕಾರದಿಂದ ಪ್ರಾರಂಭ ಮಾಡಲಾಗಿದೆ. ಆದರೆ 10ನೇ ತರಗತಿಯ ನಂತರ ಕಾಲೇಜು ಮತ್ತು ಐ.ಟಿ.ಐ ತರಬೇತಿ ಪಡೆಯಲು ಸಾಮಾನ್ಯ ಮಕ್ಕಳ ಜೊತೆ ಹೋಗುವ ಪರಿಸ್ಥಿತಿ ಇದೆ. ವಿಕಲಚೇತನ ಮಕ್ಕಳು ಸಾಮಾನ್ಯ ಮಕ್ಕಳ ಜೊತೆ ಹೊಂದಿಕೊಂಡು ಹೋಗಲು ತೊಂದರೆ ಉಂಟಾಗಿ ವಿದ್ಯಾಭ್ಯಾಸವನ್ನೇ ತೊರೆಯುತ್ತಿದ್ದಾರೆ. ಅದರಂತೆ 1 ರಿಂದ 10ನೇ ತರಗಿತಿಯ ವರೆಗೆ ನೀಡಿರುವ ವಿಶೇಷ ಶಾಲೆಗಳಂತೆ ಕಾಲೇಜು ಹಾಗೂ ಐ.ಟಿ.ಐ ತರಬೇತಿಗೂ ಅನುಮತಿ ನೀಡುವ ಬಗ್ಗೆ ಮಾನ್ಯ ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವರ ಗಮನ ಸೆಳೆಯಬಯಸುತ್ತೇನೆ.**

**ಉತ್ತರ:**

ಪದವಿ ಪೂರ್ವ ಶಿಕ್ಷಣ ಹಂತದಲ್ಲಿ ವಿಶೇಷ ಚೇತನರಿಗೆ ಪ್ರತ್ಯೇಕವಾದ ಕಾಲೇಜುಗಳು ಇರುವುದಿಲ್ಲ ಹಾಗೂ ವಿಶೇಷ ಚೇತನರಿಗಾಗಿ ಪ್ರತ್ಯೇಕವಾದ ಪದವಿ ಪೂರ್ವ ಕಾಲೇಜುಗಳನ್ನು ಪ್ರಾರಂಭಿಸುವ ಪ್ರಸ್ತಾವನೆ ಇರುವುದಿಲ್ಲ. ಆದರೆ, ವಿದ್ಯಾರ್ಥಿಗಳ ದಾಖಲಾತಿ ಸಂದರ್ಭದಲ್ಲಿ ಶೇ. 5 ರಷ್ಟು ಸೀಟುಗಳನ್ನು ವಿಶೇಷ ಚೇತನ ವಿದ್ಯಾರ್ಥಿಗಳಿಗೆ ಮೀಸಲಿಡಲಾಗಿರುತ್ತದೆ.

ಪದವಿ ಪೂರ್ವ ಕಾಲೇಜುಗಳಲ್ಲಿ ವಿಶೇಷ ಚೇತನ ವಿದ್ಯಾರ್ಥಿಗಳು ದಾಖಲಾಗಿರುವ ಅಂಕಿ ಅಂಶಗಳ ವಿವರ.

| ಕಾಲೇಜುಗಳ ವಿಧ | 2023-24 | |
|---|---|---|
| | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ |
| ಸರ್ಕಾರಿ | 586 | 646 |
| ಅನುದಾನಿತ | 190 | 274 |
| ಅನುದಾನರಹಿತ | 536 | 549 |
| **ಒಟ್ಟು** | **1312** | **1469** |

ಪ್ರಸಕ್ತ ವರ್ಷದಲ್ಲಿ ಪ್ರಥಮ ಪಿಯುಸಿಯಲ್ಲಿ ಒಟ್ಟು 1312 ಮತ್ತು ದ್ವಿತೀಯ ಪಿಯುಸಿಯಲ್ಲಿ 1469 ವಿದ್ಯಾರ್ಥಿಗಳು, ಸಾಮಾನ್ಯ ಕಾಲೇಜುಗಳಲ್ಲಿ ದಾಖಲಾತಿ ಹೊಂದಿರುತ್ತಾರೆ.

**ಐಟಿಐ ತರಬೇತಿ ಕೇಂದ್ರಗಳನ್ನು ತೆರೆಯುವ ಕುರಿತಂತೆ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯು ನೀಡಿರುವ ಮಾಹಿತಿಯು ಈ ಕೆಳಕಂಡಂತಿರುತ್ತದೆ.**

ವಿಶೇಷ ಚೇತನರಿಗಾಗಿ ಪ್ರತ್ಯೇಕವಾದ ಐಟಿಐ ತರಬೇತಿ ಕೇಂದ್ರಗಳನ್ನು ತೆರೆಯುವ ಬಗ್ಗೆ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. ಆದಾಗ್ಯೂ ರಾಜ್ಯದ 270 ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಗಳು ಹಾಗೂ 192 ಅನುದಾನಿತ ಕೈಗಾರಿಕಾ ತರಬೇತಿ ಸಂಸ್ಥೆಗಳ ಪ್ರವೇಶ ಪ್ರಕ್ರಿಯೆಯಲ್ಲಿ ಶೇ. 5ರಷ್ಟು ಸೀಟುಗಳನ್ನು ವಿಶೇಷ ಚೇತನರಿಗಾಗಿ ಮೀಸಲಿಡಲಾಗಿದೆ. ಕಳೆದ 3 ವರ್ಷಗಳಲ್ಲಿ 930 ವಿಶೇಷ ಚೇತನ ಮಕ್ಕಳು ಐಟಿಐ ಗಳಲ್ಲಿ ಪ್ರವೇಶ ಪಡೆದುಕೊಂಡು ವೃತ್ತಿ ಕೌಶಲ್ಯಗಳನ್ನು ಪಡೆಯುತ್ತಿದ್ದಾರೆ.

2021 ರಿಂದ 2023ನೇ ಶೈಕ್ಷಣಿಕ ವರ್ಷದಲ್ಲಿ ವಿಶೇಷ ಚೇತನ ಮಕ್ಕಳು ಐಟಿಐ ಗಳಲ್ಲಿ ಪ್ರವೇಶ ಪಡೆದಿರುವ ಮಾಹಿತಿಯನ್ನು **ಅನುಬಂಧದಲ್ಲಿ** ನೀಡಲಾಗಿದೆ.

**ಇಪಿ 38 ಡಿಜಿಡಬ್ಲ್ಯೂ 2023**

**(ಎಸ್. ಮಧುಬಂಗಾರಪ್ಪ)**

**ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.**

| ADMISSION DETAILS OF PHYSICALLY CHALLENGED | | | | | | | |
|---|---|---|---|---|---|---|---|
| SL NO | YEAR | SEATS AVAILABLE FOR PH | | | ADMITTED | | |
| | | GOVT | GIA | TOTAL | GOVT | GIA | TOTAL |
| 1 | 2021 | 2886 | 887 | 3773 | 135 | 15 | 150 |
| 2 | 2022 | 2886 | 887 | 3773 | 436 | 288 | 724 |
| 3 | 2023 | 2886 | 887 | 3773 | 51 | 5 | 56 |
| **TOTAL** | | **8658** | **2661** | **11319** | **622** | **308** | **930** |

COMMISSIONER

INDUSTRIAL TRAINING & EMPLOYMENT